ದಿನಾಂಕ 22-08-2025 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ವಾದಿಗಳ ಪರ ಶ್ರೀ ಬಿ ಎಸ್ ಎಚ್ ವಕೀಲರಿಂದ .

ವಾದಿ ನಿಮ್ಮ ಊರಿನವರು, ನಿಮಗೆ ಪರಿಚಯದವರು ಎಂದರೆ ಸರಿ. ಬಿ ಕೆ ಹಳ್ಳಿ ಗ್ರಾಮದ ಸರ್ವೇ ನಂಬರ 168/2 ರಲ್ಲಿನ 1 ಎಕರೆ 32 ಗುಂಟೆ 12 ಆಣೆ ವಾದಿಯ ಕಬ್ಜೆಯಲ್ಲಿ ಇದೆ ಎಂದರೆ ಸರಿ. ವಾದಿಗೆ ಆ ಸ್ವತ್ತು ತಮ್ಮ ಅಣ್ಣ ತಮ್ಮಂದಿರ ನಡುವೆ ಆದ ವಾಟಣಿಯಲ್ಲಿ ಬಂದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಹನಮಂತ ತುಂಬೂಕರ ರವರ ಕಡೆಯಿಂದ ಸರ್ವೇ ನಂಬರ 586 ಅನ್ನು ಖರೀದಿಸಿದ್ದೇವೆ ಎನ್ನುತ್ತಾರೆ. ವಾದಿಗೆ ಆ ಸ್ವತ್ತು ವಾಟಣಿಯಲ್ಲಿ ಅವರ ಹಿಸ್ಸೆಗೆ ಬಂದ ನಂತರ ಮೋಜಣಿ ಮಾಡಿಸಿ ಉತಾರದಲ್ಲಿ ತಮ್ಮ ಹೆಸರು ನಮೂದಿಸಿಕೊಂಡು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ವಿ ಪಿ ಸಿ ನಂಬರ 586 ಅನ್ನು ಪಂಚಾಯತಿಯಲ್ಲಿ ಶಾಮೀಲಾಗಿ ಖೊಟ್ಟಿಯಾಗಿ ನಿಮ್ಮ ಹೆಸರಿಗೆ ನಮೂದಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಹನಮಂತ ತುಂಬೂಕರವರಿಂದ ವಿ ಪಿ ಸಿ ನಂಬರ 586 ಅನ್ನು ಖರೀದಿಸಿ ಪಂಚಾಯತಿಯ ಸದಸ್ಯರಿಂದ ಪಂಚಾಯತಿ ದಾಖಲೆಗಳಲ್ಲಿ ನಮ್ಮ ಹೆಸರನ್ನು ನಮೂದಿಸಿಕೊಂಡಿದ್ದೇವೆ ಎನ್ನುತ್ತಾರೆ. ಹನಮಂತ ತುಂಬೂಕರವರಿಂದ ವಿ ಪಿ ಸಿ ನಂಬರ 586 ರಲ್ಲಿನ 3 ಗುಂಟೆ ಸಂಬಂಧಿಸಿದಂತೆ ನೋಂದಾಯಿತ ಖರೀದಿ ಪತ್ರ ಆಗಿದೆಯೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಡಿ 1 ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆ ಅಲ್ಲ ಎಂದರೆ ಸರಿ. ನಿಡಿ 3 ರ ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆ ಅಲ್ಲ ಎಂದರೆ ಸರಿ. ಹನಮಂತ ತುಂಬೂಕರವರಿಂದ ವಿ ಪಿ ಸಿ ನಂಬರ 586 ರಲ್ಲಿನ 3 ಗುಂಟೆ

ಸಂಬಂಧಿಸಿದಂತೆ ನೋಂದಾಯಿತ ಖರೀದಿ ಪತ್ರವಿಲ್ಲದ ಕಾರಣ ಅದನ್ನು ಈ ದಾವೆಯಲ್ಲಿ ನೀವು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನೀವು ವಾದಿ ಮತ್ತು ಅವರ ಸಹೋದರರ ವಿರುದ್ಧ ದಾವೆ ಹೂಡಿದ್ದೀರಿ ಎಂದರೆ ಸರಿ. ಆ ದಾವೆಯ ಸಂಖ್ಯೆ 101/2021, ಅದರಲ್ಲಿ ಅಂತಿಮ ಆದೇಶ ನಿಮ್ಮ ವಿರುದ್ಧ ಆಗಿ ದಾವೆ ವಜಾ ಆಯಿತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಿ ಪಿ ಸಿ ನಂಬರ 586 ರಲ್ಲಿನ 3 ಗುಂಟೆ ಆಸ್ತಿ ಯಾವತ್ತೂ ನಿಮ್ಮ ಕಬ್ಜೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಹಣ ಕೊಟ್ಟು ಖರೀದಿಸಿದ್ದೇವೆ ಎನ್ನುತ್ತಾರೆ. ವಿ ಪಿ ಸಿ ನಂಬರ 586 ರಲ್ಲಿನ 3 ಗುಂಟೆ ಆಸ್ತಿ ಯಾವತ್ತೂ ನಿಮ್ಮ ಕಬ್ಜೆಯಲ್ಲಿ ಇಲ್ಲದಿದ್ದರೂ ಸಹ ಕಬ್ಜೆಯಲ್ಲಿ ಇದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಯಲ್ಲಿನ 3 ಗುಂಟೆ ಜಾಗವನ್ನು ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಖೊಟ್ಟಿ ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.